doc-503
T.P-2

Reg No M 1229 42nd Year Sri "Satyavadi" Mysore 2—1—1958

ಸತ್ಯವಾದಿ

ಬಿಡಿ ಪ್ರತಿ 3 ಪೈ | ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ರಾಯಶಾಸ್ತ್ರಿ

ಹೊರದೇಶದಿಂದ ಅಕ್ಕಿಯನ್ನು ಪಡೆಯುವ ಪ್ರಯತ್ನ ವಿಫಲ

ರಾಜಾಜಿ ವರ್ಧಂತಿ

ಮದ್ರಾಸು 1 — ಶ್ರೀ ಸಿ. ರಾಜಗೋಪಾಲಾಚಾರಿಯವರಿಗೆ 79 ವರ್ಷಗಳು ತುಂಬಿದ ಸಂದರ್ಭದಲ್ಲಿ ಅವರನ್ನು ಅಭಿನಂದಿಸಲು ಏರ್ಪಾಟು ಮಾಡಿದ್ದ ಸಭೆಯಲ್ಲಿ ವಿದ್ಯಾಸಚಿವ ಆರ್ಥಿಕ ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂರವರು ಭಾಷಣ ಮಾಡುತ್ತಾ, ರಾಷ್ಟ್ರಕ್ಕೆ ಮಾರ್ಗದರ್ಶನ ಮಾಡುವದರಲ್ಲಿ ಗಾಂಧಿಯವರೊಡನೆ ಅವರನ್ನು ಹೋಲಿಸಿದರು. ಮೈಸೂರಿನ ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಭಾಷಣಮಾಡುತ್ತಾ, ಕೆಲವರು ರಾಜಾಜಿಯನ್ನು ಒಪ್ಪದಿದ್ದಾಗ್ಯೂ ಅನೇಕರಿಗೆ ಅವರಲ್ಲಿ ವಿಶ್ವಾಸವಿದೆ ಎಂದರು.

ಸಿಗರೇಟು ಬೆಲೆ ಇಳಿಯುವದು

ನವ ದೆಹಲಿ 1 — ಹೊಗೇಸೊಪ್ಪಿನ ಮೇಲೆ ದೊರೆತಿರುವ ಅಬ್ಕಾರಿ ರಿಯಾಯಿತಿಯಿಂದ ಸಿಗರೇಟು ಬೆಲೆ ಇಳಿಯುವ ನಿರೀಕ್ಷೆ ಇದೆ.

ಅಕ್ರಮ ಸಾಗಾಣಿಕೆ ಯತ್ನ

ಚಿಕ್ಕಬಳ್ಳಾಪುರದ ಫಾರೆಸ್ಟ್ ರೇಂಜರ್‌ರಾದ ಶ್ರೀ ಭಾಸ್ಕರರವರು ಸುಮಾರು ರೂ 10 ಸಹಸ್ರ ಮೌಲ್ಯದ 4 ವರೆ ಟನ್ ಗಂಧ ತೊಲೆಗಳನ್ನು ಆಶ್ಚರ್ಯಕರ ಭೇಟಿ ಇತ್ತು ವಶಮಾಡಿಕೊಂಡರು ಗಂಧದ ತೊಲೆಗಳು ಇನ್ನೇನು ಅಕ್ರಮವಾಗಿ ಲಾರಿಯಲ್ಲಿ ಸಾಗುವದರಲ್ಲಿತ್ತು.

ಆಶ್ಚರ್ಯ ವ್ಯಕ್ತತೆ

ಬೊಂಬಾಯಿ 1 — ಕೇರಳ ಆರ್ಥಮಂತ್ರಿ ಶ್ರೀ ಸಿ. ಅಚ್ಯುತ ಮೆನನರು ಈದಿನ ಇಲ್ಲಿ ಬಹಿರಂಗ ಸಭೆಯಲ್ಲಿ ಭಾಷಣ ಮಾಡುತ್ತಾ, ಕೇರಳ ಶಿಕ್ಷಣ ಮಸೂದೆಯನ್ನು ಸರ್ವೋಚ್ಚ ನ್ಯಾಯಾಲಯದ ಪರಿಶೀಲನೆಗೆ ಭಾರತ ಸರ್ಕಾರ ಕಳಿಸಿರುವ ಬಗ್ಗೆ ಆಶ್ಚರ್ಯ ವ್ಯಕ್ತಮಾಡಿದರು.

ಮುಖ್ಯ ಮಂತ್ರಿಗಳ ತೀರ್ಮಾನ

ಮಹಾಬಲಿಪುರಂ 1 — 1965ರಿಂದ ಇಂಗ್ಲೀಷನ್ನು ಅಧಿಕೃತ ಭಾಷೆಯಾಗಿ ಕೈಬಿಡುವದು ಅಗದಕಾರ್ಯ ಎಂದು ಆಂಧ್ರ, ಮೈಸೂರು ಮತ್ತು ಮದರಾಸು ಮುಖ್ಯ ಮಂತ್ರಿಗಳು ಒಪ್ಪಂದಕ್ಕೆ ಬಂದಿರುವರು.

ಓಡಿಹೋದ ಸಂದರ್ಭ ಮೊಕದ್ದಮೆ

ಬಾಗೇಪಲ್ಲಿ ಪೋಲೀಸರು ಚಿಕ್ಕಬಳ್ಳಾಪುರದ ವಿಶೇಷ ಪ್ರಥಮ ನ್ಯಾಯಾಧೀಶರ ಕೋರ್ಟಿನಲ್ಲಿ 16 ವರ್ಷದ ಅಂಜನಮ್ಮನೆಂಬವಳು ಸರಸಪ್ಪ, ಲಕ್ಷ್ಮಣ್ಣ ನೆಂಬವರೊಡನೆ ಓಡಿಹೋದಳೆಂದು 3 ಜನರ ಮೇಲೂ ಮೊಕದ್ದಮೆ ಹೂಡಿರುವರು ತಿರುಪತಿಯಲ್ಲಿ ಅವರನ್ನು ಪತ್ತೆ ಮಾಡಿ ವಾಪಸು ಕರೆತರಲಾಗಿದೆ ಈ ಸಂಬಂಧವಾಗಿ 70 ವರ್ಷದ ಅವಳ ಗಂಡ ಎಟ್ಟಿಕೋಟ ವೆಂಕಟರಾಯಪ್ಪ ಪೋಲೀಸರಿಗೆ ದೂರಿತ್ತಿದ್ದನು

ಪರಿವರ್ತಿಸಲು ಅನುಮತಿ

'1857' ಗ್ರಂಥ ಪ್ರಕಟಣೆಯನ್ನು ಹಂಗೇರಿ ಭಾಷೆಗೆ ಪರಿವರ್ತಿಸಲು ಭಾರತ ಸರ್ಕಾರ ಅನುಮತಿಸಿದೆ ಎಂದು ಗೊತ್ತಾಗಿದೆ

ಕ್ಯಾಲೆಂಡರು ಸ್ವೀಕಾರ

ಮೈಸೂರು ಶ್ರೀರಾಂಪೇಟೆಯಲ್ಲಿರುವ ಪ್ರಸಿದ್ಧ ಕಾಫಿಪುಡಿ ವ್ಯಾಪಾರಸ್ಥರಾದ ರಾಜಾ ಕಾಫೀ ವರ್ಕ್ಸ್‌ನವರು ಕಳುಹಿಸಿರುವ ಸುಂದರವಾದ ತ್ರಿವರ್ಣ ಚಿತ್ರವುಳ್ಳ ಈ ವರ್ಷದ ಕ್ಯಾಲೆಂಡರನ್ನು ಸಾದರದಿಂದ ಸ್ವೀಕರಿಸಿದ್ದೇವೆ.

ರಂಗೂನಲ್ಲಿರುವ ಬರ್ಮಾ ಮರದ ಸಮಿತಿಯಿಂದ ಭಾರತ ರೈಲ್ವೆ ಕ್ರೂ 85 ಲಕ್ಷದ ರೈಲ್ವೆ ಸ್ಲೀಪರುಗಳನ್ನು ಕೊಳ್ಳುವದು

ಮಂತ್ರಿಗಳ ಉಡುಪು ಸರಿಯಿಲ್ಲ !

ಬೊಂಬಾಯಿ 1 — ಸಾಂತದ ಮಂತ್ರಿಗಳು ಸಾರ್ವಜನಿಕ ಸಮಾರಂಭಗಳಲ್ಲಿ 'ಮುಂಡು' ಧರಿಸಿ ಬರುವದು ತಮಗೆ ಒಪ್ಪಿಗೆ ಇಲ್ಲವೆಂದು ಡಾ|| ಎ. ರಾಮಸ್ವಾಮಿ ಮೊದಲಿಯಾರರು ತಿಳಿಸಿರುವರು.

ಮದುವೆ ಮಾರ್ಗದರ್ಶಕ ಕೇಂದ್ರ

ಸತಿಪತಿಯರ ಸಮಸ್ಯೆ ಪರಿಹರಿಸಲು ವಿವಾಹ ಮಾರ್ಗದರ್ಶಕ ಕೇಂದ್ರಗಳನ್ನು ಸರ್ಕಾರ ಆರಂಭಿಸಬೇಕೆಂದು ಭಾರತದ ಕುಟುಂಬ ಯೋಜನೆಯ ಅಧ್ಯಕ್ಷೆಣಿ ಶ್ರೀಮತಿ ಧನ್ವಂತರಿ ರಾಮರಾಯರು ಹುಬ್ಬಳ್ಳಿ ಪೌರಸಭೆಯಲ್ಲಿ ಭಾಷಣಮಾಡುತ್ತಾ ತಿಳಿಸಿದರು.

ರೈಲು ಅಪಾಹುತದಲ್ಲಿ

34 ಸಾವು

ಅಂಬಾಲಾ 1 — ಈ ದಿನ ಬೆಳಿಗ್ಗೆ ಕಳೆದ ರಾತ್ರಿ ದೆಹಲಿಯನ್ನು ಬಿಟ್ಟ "ದೆಹಲಿ—ಪಠಾಣಕೋಟೆ ಜನತಾ ಎಕ್ಸ್‌ಪ್ರೆಸ್" ಮೋಹ್ರಿ ನಿಲ್ದಾಣದಲ್ಲಿ ನಿಂತಿದ್ದ ದೆಹಲಿ ಪ್ಯಾಸೆಂಜರು ರೈಲಿಗೆ ಬಡಿದು ಏಂಡು ಇಂಜಿನ್‌ಗಳೂ ಅದರ ಹಿಂದಿನ ಜೋಗಿಗಳೂ ನಾಶವಾದವು 34 ಜನರು ಸತ್ತು 89 ಜನರು ಗಾಯಗೊಂಡರು. ಗಾಯಗೊಂಡವರ ಪೈಕಿ 6 ಜನರ ಸ್ಥಿತಿ ವಿಷಮಿಸಿದೆ. ಈ ದುರ್ಘಟನೆ ಬೆಳಿಗ್ಗೆ 4 ಗಂಟೆಯಲ್ಲಿ ಸಡೆಯಿತು ಸತ್ತವರ ಸಂಖ್ಯೆ ಇನ್ನೂ ಏರುವ ನಿರೀಕ್ಷೆ ಇದೆ.

ಕೇಂದ್ರದ ಅನುಮತಿ

ತಿಂಗಳೊಂದಕ್ಕೆ 10 ಟನ್ನುಗಳಷ್ಟು ಅಕ್ಕಿಯನ್ನು ಆಂಧ್ರ ಪ್ರದೇಶದಿಂದ ದಕ್ಷಿಣ ವಲಯದ ಹೊರಗೆ ಕಳಿಸಲು ಭಾರತ ಸರ್ಕಾರ ಅನುಮತಿಸಿದೆ.

ಸುದ್ದಿಗಳು

ಲಾಹೋರು 29— ಇಸ್ಲಾಂ ಮತವು ಶತಮಾನಗಳಿಂದ ಅರ್ಧಂಬರ್ಧ ತಿಳಿವಳಿಕೆಯು ನಂತ್ರು ತಪ್ಪು ಶಿಕ್ಷಣ ಪಡೆದ ಮುಲ್ಲಾಗಳ ಕೈಗೆ ಬಿದ್ದಿರುವದೆಂದೂ, ಅದನ್ನು ಮಸೀದಿ ಮತ್ತು ಕೊರಾನ್ ಶಾಲ್ಕು ಗೋಡೆಗಳಿಂದ ಹೊರಕ್ಕೆ ತೆಗೆದು ಹಾಕಿರೆಂದೂ ಪಾಕಿಸ್ತಾನ ಅಧ್ಯಕ್ಷ ಇಸ್ಕಂದರ್ ಮಿರ್ಜಾ, ಅಂತರರಾಷ್ಟ್ರೀಯ ಇಸ್ಲಾಂ ಗೋಷ್ಠಿಯನ್ನು ಉದ್ಘಾಟಿಸುತ್ತಾ ಹೇಳಿದರು — ಈ ಗೋಷ್ಠಿಗೆ ಮುಸ್ಲಿಂ ಮತ್ತು ಮುಸ್ಲಿಮೇತರ 31 ದೇಶಗಳಿಂದ 130 ಮಂದಿ ವಿದ್ವಾಂಸರು ಬಂದಿರುವರು.

o o

ವಿಶಾಖಪಟ್ಟಣಂ — ಯೋಜನೆಯು ಕಾರ್ಮಿಕರಿಗೆ ಆಘಾತದಾಯಕವಾದುದೆಂದೂ, ಅದರಿಂದ ಅದಕ್ಕೆ ನೆರವು ನೀಡಬೇಕೆಂದೂ ಕಮ್ಯೂನಿಸ್ಟ್ ನಾಯಕ ಡಾಂಗೆ ಹೇಳಿರುವರು.

ಶಾಲೆಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞ ಶಿರೋಮಣಿ
ಸಂಪತ್ಕುಮಾರ್ ಜೋಯಿಸರಿಂದ

3 ತ್ರಯೋದಶಿ ರೋಹಿಣಿ

ವಾರ್ತೆಗಳು

ನಾಗಪುರ 30— ಭಾರತ ಸರಕಾರದ ಕೈಗಾರಿಕೆ ವಾಣಿಜ್ಯ ಮಂತ್ರಿ ಶ್ರೀ ಮೊರಾರ್ಜಿ ದೇಸಾಯಿ ರವರು ಈ ಮಧ್ಯಾಹ್ನ ಇಲ್ಲಿ ಅಖಿಲ ಭಾರತ ವಾಣಿಜ್ಯ ಸಮ್ಮೇಳನವನ್ನು ಉದ್ಘಾಟಿಸಲು ಒಂದಾಗ ವಿದರ್ಭ ಪ್ರಜಾ ಸೋಷಲಿಸ್ಟ್ ಪಾರ್ಟಿಯ ನೂರು ಮಂದಿ ಸ್ವಯಂಸೇವಕರು ಪ್ರದರ್ಶನ ನಡೆಸಿ, ಸಂಯುಕ್ತ ಮಹಾರಾಷ್ಟ್ರದ ಘೋಷಣೆ ಮಾಡಿದರು.

ಕೈರೋ 29— ಇಂಡೋ ಆಫ್ರಿಕಾ ಸಮ್ಮೇಳನದ ರಾಜಕೀಯ ಕಮಿಷನ್ನಿನವರು ಗೋವಾದ ಬಗ್ಗೆ ಭಾರತದ ಹಕ್ಕನ್ನು ಸಮ್ಮೇಳನಕ್ಕೆ ಶಿಫಾರಸು ಮಾಡಲು ನಿರ್ಧರಿಸಿದರು.

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ ವಾರಾಂತ್ಯ ಪತ್ರಿಕೆ

ವಾರ್ಷಿಕಚಂದಾ ಅಂಚೆವೆಚ್ಚಸೇರಿ 1-80

ಶಕ್ತಿಸುಧಾ

— ಉತ್ತಮ ಟಾನಿಕ್ —

ವುಡ್‌ಲ್ಯಾಂಡ್ಸ್

ತೇಜಸ್ವಿ 10 ನೇ ವಾರ

ಮದರ್ ಇಂಡಿಯ

ವರ್ಣರಂಜಿತ ಹಿಂದಿ ಚಿತ್ರರತ್ನ

ಪಾತ್ರ — ನರ್ಗಿಸ್, ಸುನಿಲದತ್

ದಿನವಹಿ 3 ಪ್ರದರ್ಶನಗಳು

ಉಮಾ ಟಾಕೀಸ್

26-12-57 ರಿಂದ

— ಅಮೋಘ ತೆಲುಗು ಚಿತ್ರ —

ಜಯಸಿಂಹ

ಪಾತ್ರ— ಅಂಜಲಿದೇವಿ, ಗುಮ್ಮಡಿ

ಎನ್. ಟಿ. ರಾಮರಾವ್, ರೇಲಂಗಿ

[ಪ್ರತಿದಿನ 3 ಆಟಗಳು]

ಪ್ರತಿ ಶುಕ್ರವಾರ, ಶನಿವಾರ, ಭಾನುವಾರ

ಬೆಳಗಿನ ಪ್ರದರ್ಶನ 10-30 ಕ್ಕೆ.

ಪತ್ರಿಕಾ ಪ್ರಕಟಣೆ

ಬೆಂಗಳೂರು 31— ದ್ವಿತೀಯ ಪಂಚವಾರ್ಷಿಕ ಯೋಜನೆಗೆ ಸಾರ್ವಜನಿಕ ಸಹಾಯ ಮತ್ತು ಸಹಕಾರವನ್ನು ದೊರಕಿಸುವುದಕ್ಕಾಗಿ ಖಾಸಗಿ ಸಂಘ ಸಂಸ್ಥೆಗಳ, ರಾಜ್ಯಸರಕಾರದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯಿತಿಗಳ ನಿಕಟ ಸಹಕಾರದೊಂದಿಗೆ ಸಂಘಟಿಸುವ ಯೋಜನೆಗಳಿಗಾಗಿ ಸಹಾಯ ನೀಡಲು ಯೋಜನಾ ಆಯೋಗದವರು ನಾಲ್ಕು ಕೋಟಿ ರೂಪಾಯಿಗಳನ್ನು ತೆಗೆದಿರಿಸಿದ್ದಾರೆ

ಹೃದಯದ ಚಲನವಲನ

ಚಾಲ್ಸ್‌ಟನ್— ಹೃದಯದ ಅತಿ ಸೂಕ್ಷ್ಮ ಚಲನವಲನಗಳನ್ನು ವಿದ್ಯುಚ್ಛಕ್ತಿ ಕೇತಗಳನ್ನಾಗಿ ಪರಿವರ್ತಿಸುವ ಉಪಕರಣವೊಂದು ಈಗ ಇಲ್ಲಿನ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿದೆ.

ಆಹಾರ ಕೊರತೆ ನೀಗಲು ಹೊಸ ರಾಟೆ

ದೇಶದಲ್ಲಿ ಆಹಾರದ ಹಾಗೂ ಪೌಷ್ಟಿಕ ಆಹಾರದ ಕೊರತೆಯನ್ನು ನಿವಾರಿಸುವ ರಾಷ್ಟ್ರೀಯ ಜಳವಳಿಯಲ್ಲಿ ಕೇಂದ್ರ ಆಹಾರ ಸಂಶೋಧನಾ ಸಂಸ್ಥೆಯು ಪ್ರಮುಖ ಪಾತ್ರವನ್ನು ನಿರ್ವಹಿಸಿದೆ ; ಕಚ್ಚಾ ಹಾಗೂ ಎರಡನೆಯ ದರ್ಜೆಯ ಆಹಾರ ವಸ್ತುಗಳನ್ನು ಸುಧಾರಿಸಿ, ಪ್ರಥಮ ದರ್ಜೆಯ ಹಾಗೂ ಪೌಷ್ಟಿಕ ಆಹಾರಗಳಾಗಿ ಪರಿವರ್ತಿಸಲು ಸಂಶೋಧನೆ ನಡೆಸಿದೆ — ಅಗ್ಗದ ಬೆಲೆಯ ವಿದೇಶೀ ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ಧಾನ್ಯಗಳನ್ನು ತಯಾರಿಸುವ ವಿಧಾನಗಳನ್ನು ಈ ಕೇಂದ್ರವು ರೂಪಿಸಿದೆ ; ಇದು ಈ ಸಂಸ್ಥೆಯ ಸಂಶೋಧನಾ ಕೆಲಸಗಳಲ್ಲಿ ಅತಿ ಮುಖ್ಯವಾದುದು ಈ ಸಂಸ್ಥೆಯನ್ನು 1950 ರ ಅಕ್ಟೋಬರಿನಲ್ಲಿ ಮೈಸೂರಿನಲ್ಲಿ ಸ್ಥಾಪಿಸಲಾಯಿತು ; ಭಾರತದಲ್ಲಿ ಈಗಿರುವ 18 ರಾಷ್ಟ್ರೀಯ ಪ್ರಯೋಗಶಾಲೆಗಳಲ್ಲಿ ಇದು 5 ನೆಯದು.

ಬೊಂಬಾಯಿ 31— ಮುನಿಸಿಪಲ್ ಸರಹದ್ದಿನಲ್ಲಿರುವ ಹೋಟಲುಗಳಲ್ಲಿ ಮಂಗಳವಾರ ಶುಕ್ರವಾರಗಳಲ್ಲಿ ಅಕ್ಕಿಯಿಂದ ತಿಂಡಿಗಳನ್ನು ತಯಾರಿಸಕೂಡದೆಂಬ ಆಜ್ಞೆಯಂತೆ ಇಂದು ಹೋಟಲುಗಳಲ್ಲಿ ಅಕ್ಕಿಯಿಂದಾದ ತಿಂಡಿಗಳಿಲ್ಲದೆ, ಗಿರಾಕಿಗಳು ಅಸಂತುಷ್ಟರಾಗಿ ವ್ಯಾಪಾರ ಸ್ವಲ್ಪ ತಗ್ಗಿತ್ತು.



ಶಾಂತಿ ಮೂವಿ ಏರ್ಟೋವರ್

ಅಪೆರಾ— ಜಯಪ್ರದ 2 ನೇ ವಾರ

ಮಾಯಾಬಜಾರ್

ಎನ್. ಟಿ. ರಾಮರಾವ್, ಸಾವಿತ್ರಿ, ರಂಗರಾವ್, ನಾಗೇಶ್ವರರಾವ್, ರೇಲಂಗಿ

ಅಭಿನಯಿಸಿರುವ ಮನಮೋಹಕ ಕನ್ನಡ ಚಿತ್ರ

ಪ್ರತಿ ದಿನ 3 ಆಟಗಳು

SHAKTI SUDHA

A Superb Tonic

Protect the cow ಗೋ ಸಂರಕ್ಷಣೆ ಮಾಡಿ

ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ

ಅಶೋಕಾ ಫಾರ್ಮಸಿ

ಅಶೋಕ್ ಬಜಾರ್, ಮೈಸೂರು

For Quality Printing

L. N. Press

Sivarampet, Mysore

Edited, Printed& Published by Dharma Prachara Nrsin M S Krishna Rao at the Satyavadi Press Chamrajpuram Mysore.